ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೧

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತೆಂಟನೆಯ ಅಧಿವೇಶನ**

**ಸೋಮವಾರ, ದಿನಾಂಕ: ೧೫ನೇ ಜುಲೈ ೨೦೧೯**

---

**ಸಮೂಹ – I**

೧. ಕೃಷಿ ಸಚಿವರು.

೨. ಸಮಾಜ ಕಲ್ಯಾಣ ಸಚಿವರು.

೩. ಸಹಕಾರ ಸಚಿವರು.

೪. ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

೫. ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು.

೬. ತೋಟಗಾರಿಕೆ ಸಚಿವರು

೭. ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

---

## ಬೀದರ್ ಜಿಲ್ಲೆಯಲ್ಲಿ ಕೃಷಿ ಭಾಗ್ಯ ಯೋಜನೆ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧ (೬೩) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿ ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಿದ ಅನುದಾನ ಎಷ್ಟು ; ಆಯ್ಕೆ ಮಾಡಿದ ಫಲಾನುಭವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬೀದರ್ ಜಿಲ್ಲೆಯಲ್ಲಿ ಬಿತ್ತನೆ ಬೀಜ ವಿತರಣಾ ಕೇಂದ್ರಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು) ಬಿತ್ತನೆ ಬೀಜ ಕೇಂದ್ರಗಳಲ್ಲಿ ರೈತರಿಗೆ ಬಿತ್ತನೆ ಬೀಜ ವಿತರಣೆ ಮಾಡಲು ವಿಳಂಬವಾಗುತ್ತಿರಲು ಕಾರಣಗಳೇನು ; ಸಮರ್ಪಕವಾಗಿ ಬಿತ್ತನೆ ಬೀಜ ವಿತರಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಕಾಡುಗೊಲ್ಲ ಜನಾಂಗದ ಅಭಿವೃದ್ಧಿ ನಿಗಮ ಸ್ಥಾಪಿಸುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೨ (೫೧) ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯಾದ್ಯಂತ ಇರುವ ಕಾಡುಗೊಲ್ಲ ಜನಾಂಗದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಾಡುಗೊಲ್ಲ ಜನಾಂಗದ ಸಮಗ್ರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ ;

(ಇ) ಇದ್ದಲ್ಲಿ, ನಿಗಮವನ್ನು ಆರಂಭಿಸಲಾಗುವುದು ಯಾವಾಗ ?

## ಇಸ್ರೇಲ್ ಮಾದರಿಯಂತೆ ತೋಟಗಾರಿಕಾ ಬೆಳೆಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

**ಡಾ. ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ) –**

೩ (೪೪+೪೫+೧೧೩) ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಇಸ್ರೇಲ್ ಮಾದರಿಯಂತೆ ತೋಟಗಾರಿಕಾ ಬೆಳೆಗಳನ್ನು ಅಭಿವೃದ್ಧಿಪಡಿಸಲು ಆಯ್ಕೆ ಮಾಡಿಕೊಂಡಿರುವ ಜಿಲ್ಲೆಗಳಾವುವು ;

(ಆ) ಸದರಿ ಜಿಲ್ಲೆಗಳಲ್ಲಿ ಇಸ್ರೇಲ್ ಮಾದರಿ ತೋಟಗಾರಿಕಾ ಬೆಳೆ ಅಭಿವೃದ್ಧಿ ಕಾರ್ಯಗಳು ಯಾವ ಹಂತದಲ್ಲಿವೆ ; ಯಾವ ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸಲಾಗುವುದು ;

(ಇ) ಸದರಿ ಕಾರ್ಯಗಳಿಗೆ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ ; ೨೦೧೮–೧೯ನೇ ಸಾಲಿನಲ್ಲಿ ಬಿಡುಗಡೆಯಾದ/ಬಳಕೆಯಾದ ಅನುದಾನವೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ರಾಜ್ಯದಲ್ಲಿ ಇಸ್ರೇಲ್ ಮಾದರಿ ಕೃಷಿ ಪದ್ಧತಿ ಚಾಲ್ತಿಯಲ್ಲಿದೆಯೇ ; ಯಾವ ಯಾವ ಮಾದರಿಗಳಲ್ಲಿ ತೋಟಗಾರಿಕೆ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ; (ಜಿಲ್ಲಾವಾರು, ಬೆಳೆವಾರು ಮಾಹಿತಿ ನೀಡುವುದು)

(ಉ) ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ''ತೋಟಗಾರಿಕಾ ಮೇಳ''ದಲ್ಲಿ ಮಾನ್ಯ ಮುಖ್ಯಮಂತ್ರಿಗಳವರು ನೀಡಿದ ಭರವಸೆಯಂತೆ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳನ್ನು ಸದರಿ ಯೋಜನೆಯ ವ್ಯಾಪ್ತಿಗೆ ಸೇರಿಸಲಾಗಿದೆಯೇ ; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು ; ಇದಕ್ಕಾಗಿ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ ; (ವಿವರ ನೀಡುವುದು)

(ಊ) ''ತೋಟಗಾರಿಕಾ ಮೇಳ''ದಲ್ಲಿ ಮಾನ್ಯ ಮುಖ್ಯಮಂತ್ರಿಗಳವರು ನೀಡಿದ ಭರವಸೆಯಂತೆ ಘಟಪ್ರಭಾ ನದಿಯಿಂದ ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ನೀರನ್ನು ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಸದರಿ ಕಾರ್ಯ ಯಾವ ಹಂತದಲ್ಲಿದೆ, ಯಾವ ಕಾಲಮಿತಿಯಲ್ಲಿ ಸದರಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ?

## ಜಾತಿ ಜನಗಣತಿ ವರದಿ ಬಹಿರಂಗ ಮಾಡದಿರುವ ಬಗ್ಗೆ

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)**–

೪ (೫೪) ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಜಾತಿ ಜನಗಣತಿ/ಸಮೀಕ್ಷೆ ನಡೆದಿದ್ದು ಯಾವಾಗ ; ಜಾತಿಗಣತಿ/ಸಮೀಕ್ಷೆ ಪೂರ್ಣಗೊಂಡಿದ್ದು ಯಾವಾಗ ; ಗಣತಿಗೆ ಎಷ್ಟು ಜನ ಅಧಿಕಾರಿ/ನೌಕರರನ್ನು ಬಳಸಿಕೊಳ್ಳಲಾಯ್ತು ; ಇದಕ್ಕಾಗಿ ವೆಚ್ಚವಾಗಿರುವ ಹಣ ಎಷ್ಟು; (ಸ್ಪಷ್ಟ ಮಾಹಿತಿ ನೀಡುವುದು)

(ಆ) ಸರ್ಕಾರ ಹೊಸದಾಗಿ ಜಾತಿ ಗಣತಿ/ಸಮೀಕ್ಷೆ ನಡೆಸಲು ಕಾರಣಗಳೇನು ; ಸಮೀಕ್ಷೆ/ಗಣತಿ ಮಾಡುವಾಗ ಯಾವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ ;

(ಇ) ಜಾತಿ ಗಣತಿ/ಸಮೀಕ್ಷೆಯ ವರದಿ ಸಿದ್ಧವಾಗಿದೆಯೇ ; ವರದಿ ಸಿದ್ಧವಾಗದಿದ್ದಲ್ಲಿ ಕಾರಣಗಳೇನು ; ವರದಿಯನ್ನು ಸರ್ಕಾರ ಅಂಗೀಕರಿಸಿದೆಯೇ ; ಅಂಗೀಕರಿಸಿದ್ದಲ್ಲಿ ಜಾರಿಗೆ ತರುವ ಬಗ್ಗೆ ಸರ್ಕಾರದ ನಿಲುವೇನು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಹೊಸದಾಗಿ ಜಾತಿವಾರು ಸಮೀಕ್ಷೆ ನಡೆಸುವುದರಿಂದ ಆಗುವ ಅನುಕೂಲ–ಅನಾನುಕೂಲತೆಗಳೇನು ? (ವಿವರ ನೀಡುವುದು)

## ಕೃಷಿ ಸಾಲಕ್ಕೆ ಹಣ ಬಿಡುಗಡೆ ಮತ್ತು ಸಾಲ ಮನ್ನಾ ಯೋಜನೆ ಅನುಷ್ಠಾನ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

**ಡಾ. ತೇಜಸ್ವಿನಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೫ (೨೨+೧೨೪) ಸಹಕಾರ ಸಚಿವರು ಈ ವಿಷಯಗಳನ್ನು ದಯಮಿಟ್ಟು ತಿಳಿಸುವರೆ –

(ಅ) ರೈತರ ಸಾಲ ಮನ್ನಾಕ್ಕೆ ಸಂಬಂಧಿಸಿದಂತೆ ಇದುವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸಾಲ ಮನ್ನಾ ಯೋಜನೆಯ ಲಾಭ ಪಡೆಯಲು ವಿಧಿಸಿರುವ ಷರತ್ತುಗಳು ಹಾಗೂ ಮಾನದಂಡಗಳಾವುವು ; ಇಲಾಖೆಗೆ ಯಾವ ಯಾವ ದಾಖಲೆಗಳನ್ನು ಕಡ್ಡಾಯವಾಗಿ ಒದಗಿಸಬೇಕಾಗಿದೆ ;

(ಇ) ಇದುವರೆಗೆ ಎಷ್ಟು ರೈತರ ಸಾಲ ಮನ್ನಾ ಆಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು) ಸಾಲ ಮನ್ನಾ ಯೋಜನೆಯ ಲಾಭ ಪಡೆದ ರೈತ ಫಲಾನುಭವಿಗಳೆಷ್ಟು ; ಸಣ್ಣ ಮತ್ತು ಮಧ್ಯಮ ರೈತರೆಷ್ಟು ;

(ಈ) ರೈತರ ಸಾಲ ಮನ್ನಾ ಮಾಡಲು ಇದುವರೆಗೆ ಎಷ್ಟು ಹಣಕಾಸು ಸಂಸ್ಥೆಗಳಿಗೆ (ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು ಸೇರಿದಂತೆ) ಹಣ ಬಿಡುಗಡೆಯಾಗಿದೆ ; (ಜಿಲ್ಲಾವಾರು, ಬ್ಯಾಂಕ್‌ವಾರು ಮಾಹಿತಿ ನೀಡುವುದು)

(ಉ) ರೈತರಿಗೆ ಕೇಂದ್ರ ಸರ್ಕಾರ ಪ್ರಕಟಿಸಿರುವ ವಾರ್ಷಿಕ ಆರು ಸಾವಿರ ರೂ.ಗಳ ಲಾಭ ಪಡೆಯಲು ಅಗತ್ಯ ಕಂದಾಯ ದಾಖಲೆಗಳಿಲ್ಲದ ರೈತರು ಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸೂಕ್ತ ದಾಖಲೆಗಳನ್ನು ರೈತರಿಗೆ ಒದಗಿಸಲು ಕಂದಾಯ ಇಲಾಖೆ ಹಾಗೂ ಬ್ಯಾಂಕ್‌ಗಳೊಂದಿಗೆ ಕೃಷಿ ಇಲಾಖೆ ವಹಿಸಿರುವ ಕ್ರಮಗಳೇನು ; ರೈತರಿಗೆ ಸಾಲ ಮನ್ನಾ ಲಾಭ ತಲುಪಿಸಲು ಬ್ಯಾಂಕ್‌ಗಳು ವಹಿಸುತ್ತಿರುವ ಪಾತ್ರವೇನು ;

(ಊ) ರಾಜ್ಯದಲ್ಲಿ ರೈತರಿಗೆ ಸಾಲ ಮನ್ನಾ ಸೌಲಭ್ಯವನ್ನು ಘೋಷಿಸಿದ ಬಳಿಕ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ಎಷ್ಟು ; ಆತ್ಮಹತ್ಯೆಗೆ ಕಾರಣಗಳೇನು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಕಬ್ಬನ್ ಪಾರ್ಕ್‌ನಲ್ಲಿನ ಅವ್ಯವಸ್ಥೆಯ ಬಗ್ಗೆ

**ಶ್ರೀ ಎಂ. ನಾರಾಯಣ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬ (೧೨೨) ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನ ಮುಖ್ಯ ಉದ್ಯಾನವನಗಳಲ್ಲೊಂದಾದ ಕಬ್ಬನ್ ಪಾರ್ಕ್‌ನಲ್ಲಿ ವಾಯುವಿಹಾರಕ್ಕೆಂದು ಬರುವ ಸಾರ್ವಜನಿಕರು ಹಾಗೂ ಹಿರಿಯ ನಾಗರೀಕರಿಗೆ ಶೌಚಾಲಯ ಇಲ್ಲದಿರುವುದರಿಂದ ಜನರು ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿರುವುದರಿಂದ ಪರಿಸರದ ಸ್ವಚ್ಛತೆ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಉದ್ಯಾನವನಕ್ಕೆ ಬರುವ ಸಾರ್ವಜನಿಕರು ಇಲ್ಲಿನ ಸರ್ಕಾರಿ ಕೇಂದ್ರ ಗ್ರಂಥಾಲಯದಲ್ಲಿನ ಶೌಚಾಲಯವನ್ನು ಅವಲಂಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಬ್ಬನ್ ಪಾರ್ಕ್‌ನಲ್ಲಿ ಶೌಚಾಲಯವನ್ನು ನಿರ್ಮಿಸಲು ಇಲಾಖೆಯು ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಿಂದ ಪರಿಶಿಷ್ಟಜಾತಿ/ಪಂಗಡದ ಕಾಲೋನಿಗಳಲ್ಲಿ ಹಾಳಾಗಿರುವ ಮೂಲಭೂತ ಸೌಲಭ್ಯಗಳಿಗೆ ಅನುದಾನ ನೀಡುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)** –

೭ (೭೦) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಸಾಕಷ್ಟು ಮೂಲಭೂತ ಸೌಲಭ್ಯಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಹಾಳಾಗಿರುವ ಈ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಬೇಕಾದ ಅಂದಾಜು ಅನುದಾನದ ಮೊತ್ತವೇನು ;

(ಇ) ೨೦೧೮–೧೯ನೇ ಸಾಲಿನಲ್ಲಿ ಸದರಿ ಸೌಲಭ್ಯಗಳನ್ನು ಕಲ್ಪಿಸಲು ಬಿಡುಗಡೆಯಾಗಿರುವ ಅನುದಾನವೆಷ್ಟು ಹಾಗೂ ಕೈಗೊಂಡಿರುವ ಕಾಮಗಾರಿಗಳ ವಿವರಗಳೇನು ;

(ಈ) ೨೦೧೯–೨೦೨೦ನೇ ಸಾಲಿನಲ್ಲಿ ಈ ಸಂಬಂಧಿತ ಕಾಮಗಾರಿಗಳಿಗೆ ನಿಗದಿಯಾಗಿರುವ, ಬಿಡುಗಡೆಯಾಗಿರುವ, ಖರ್ಚಾಗಿರುವ ಅನುದಾನವೆಷ್ಟು ಹಾಗೂ ಕಾಮಗಾರಿಗಳು ಯಾವುವು ? (ಸಂಪೂರ್ಣ ವಿವರ ನೀಡುವುದು)

## ರಾಯಚೂರಿನ ಪ್ರಾಚೀನ ಕೋಟೆ ಅಭಿವೃದ್ಧಿ ಬಗ್ಗೆ

**ಶ್ರೀ ಎಸ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೮ (೯೩) ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರಿನ ಪ್ರಾಚೀನ ಕೋಟೆ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಸದರಿ ಕೋಟೆಯ ಅಭಿವೃದ್ಧಿಗೆ ೨೦೧೫–೧೬ನೇ ಸಾಲಿನಲ್ಲಿ ನಾಲ್ಕು ಕೋಟಿ ರೂಪಾಯಿಗಳು ಮಂಜೂರಾಗಿದ್ದು ಅದನ್ನು ಉಪಯೋಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ;

(ಆ) ೨೦೧೯–೨೦ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಗೆ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾಗಿರುವ ಅನುದಾನ ಎಷ್ಟು ?

## ಗ್ರಾಮೀಣ ಭಾಗದಲ್ಲಿ ಪ್ರವಾಸೀ ತಾಣಗಳ ಅಭಿವೃದ್ಧಿ ಕುರಿತು

**ಡಾ. ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೯ (೧೧೬) ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯದ ಪ್ರವಾಸೀ ತಾಣಗಳು ಹಾಗೂ ಪ್ರವಾಸೋದ್ಯಮ ಇಲಾಖೆಗೆ ಬರುತ್ತಿರುವ ಆದಾಯವೆಷ್ಟು ;

(ಆ) ಗ್ರಾಮೀಣ ಭಾಗದ ಸುಂದರ ಗಿರಿ–ಶಿಖರಗಳಾದ ಸಾವನದುರ್ಗ ; ನಂದಿಗಿರಿ; ಚೆನ್ನಗಿರಿ ; ಸ್ಕಂದಗಿರಿ ; ಬ್ರಹ್ಮಗಿರಿ ; ವರ್ಧನಗಿರಿ ಎಂಬ ಪಂಚಗಿರಿಗಳು ರಾಜಧಾನಿಗೆ ಕೇವಲ ೫೦ ಕಿ.ಮೀ. ದೂರದಲ್ಲಿದ್ದು ಅಪಾರ ಪ್ರವಾಸಿಗಳನ್ನು ಸೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇಂತಹ ತಾಣಗಳಲ್ಲಿ ಪ್ರವಾಸಿಗರಿಗೆ ಅಗತ್ಯ ಮೂಲಭೂತ ಸೌಕರ್ಯಗಳಾದ ಸರ್ಕಾರಿ ತಂಗುದಾಣ, ಹೋಟೆಲ್, ಚಿಕಿತ್ಸಾ ಕೇಂದ್ರಗಳನ್ನು ಒದಗಿಸಲಾಗಿದೆಯೇ; ಇದಕ್ಕಾಗಿ ಅಗತ್ಯ ಹಣ ಕಾಯ್ದಿರಿಸಲಾಗಿದೆಯೇ ;

(ಈ) ಎತ್ತರದ ಅಪಾಯಕರ ತಾಣಗಳಲ್ಲಿ ಪ್ರವಾಸಿಗರ ಪ್ರವೇಶ ನಿರ್ಬಂಧಿಸಿ, ಕುಡಿತದಂತಹ ಸಮಸ್ಯೆ ತಡೆಯಲು ಸುರಕ್ಷಾ ಕ್ರಮಗಳನ್ನು ವಹಿಸಲಾಗಿದೆಯೇ;

(ಉ) ಗ್ರಾಮೀಣ ಭಾಗದ ನಿರುದ್ಯೋಗಿ ಯುವ, ಪ್ರವಾಸೀ ಮಾರ್ಗದರ್ಶಿ (Nature Guide) ಗಳ ನೇಮಕಾತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಪ್ರವಾಸೋದ್ಯಮ ಇಲಾಖೆಯಲ್ಲಿನ ಖಾಲಿ ಹುದ್ದೆಗಳ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೧೦ (೪೮) ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಒಟ್ಟು ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಯಾವಾಗ ;

(ಇ) ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು (C&R) ರೂಪಿಸಲಾಗಿದೆಯೇ ;

(ಈ) ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ (C&R) ನಿಯಮಗಳಲ್ಲಿ ಬದಲಾವಣೆ ಮಾಡುವ ಅಗತ್ಯವಿದೆಯೇ ?

## ಯಾತ್ರಾ ನಿವಾಸಿ ಮಂಜೂರಾತಿ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧ (೧೮) ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕಳೆದ ೪ ವರ್ಷಗಳಿಂದ ಬಿಡುಗಡೆಯಾದ ಅನುದಾನವೆಷ್ಟು ; (ವರ್ಷಾವಾರು ಮಾಹಿತಿ ನೀಡುವುದು)

(ಆ) ಯಾತ್ರಿ ನಿವಾಸಿ ಮಂಜೂರಾತಿಗೆ ಬಂದಿರುವ ಪ್ರಸ್ತಾವನೆಗಳೆಷ್ಟು ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಕೊಡಗು ಜಿಲ್ಲೆಯಲ್ಲಿ ಸಾಲ ಮನ್ನಾ ಯೋಜನೆಯಿಂದ ಆಗಿರುವ ಗೊಂದಲದ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨ (೮೦) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಸರ್ಕಾರದ ಸಾಲ ಮನ್ನಾ ಯೋಜನೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಜುಲೈ–೨೦೧೯ರವರೆಗೆ ರೈತರ ಸಾಲ ಮನ್ನಾ ಮಾಡಲಾದ ಪ್ರಕರಣಗಳೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಸಾಲ ಮನ್ನಾ ಯೋಜನೆಯಲ್ಲಿ ಕೊಡಗು ಜಿಲ್ಲೆಯ ರೈತರಿಗೆ ಹೊಸ ಸಾಲ ಪಡೆಯಲು ನಿರಕ್ಷೇಪಣಾ ಪತ್ರ ನೀಡಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ರೈತರಿಗೆ ನೀಡಲಾಗಿದೆ ; (ವಿವರ ನೀಡುವುದು)

(ಇ) ಕೊಡಗು ಜಿಲ್ಲೆಯ ಪಿ.ಎಲ್.ಡಿ. ಬ್ಯಾಂಕ್‌ಗಳಲ್ಲಿ ರೈತರಿಗೆ ೨೦೧೯–೨೦ನೇ ಸಾಲಿನಲ್ಲಿ ಅಲ್ಪಾವಧಿ ಸಾಲವನ್ನು ನೀಡಲಾಗಿದೆಯೇ ; ಹಾಗಿದ್ದಲ್ಲಿ, ಇಲ್ಲಿಯವರೆಗೆ ಸಾಲ ನೀಡಲಾಗಿರುವ ಮೊತ್ತವೆಷ್ಟು ? (ವಿವರ ನೀಡುವುದು)

## ಟೆಂಡರ್ ನಿಯಮಾವಳಿಗಳನ್ನು ಪಾಲಿಸದಿರುವ ಬಗ್ಗೆ

**ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೩ (೮೩) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ೨೦೧೭–೧೮ನೇ ಸಾಲಿನ ಕಟ್ಟಡ ಹಾಗೂ ಮೂಲ ಸೌಲಭ್ಯಗಳಿಗೆ ಮೀಸಲಿಟ್ಟ ಯೋಜನಾ ಮೊತ್ತವೆಷ್ಟು ;

(ಆ) ಜನವರಿ–೨೦೧೮ ರಿಂದ ಮಾರ್ಚ್–೨೦೧೮ರೊಳಗೆ ಈ ಸಂಘದಲ್ಲಿ ರೂ. ೨೧೭೬.೦೦ ಕೋಟಿ ಮೊತ್ತಕ್ಕೆ ಟೆಂಡರ್ ಕರೆದು ಕಾರ್ಯಾದೇಶ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಟೆಂಡರ್‌ನ ಮೊತ್ತವೆಷ್ಟು ; (ಟೆಂಡರ್‌ದಾರರ ಹೆಸರು, ಟೆಂಡರ್, ಕಾರ್ಯಾದೇಶ ನೀಡಿದ ದಿನಾಂಕ ನೀಡುವುದು)

(ಈ) ಮೇಲ್ಕಂಡ ಸಂಘದಲ್ಲಿ ಟೆಂಡರ್ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಿ, ನಿಯಮಾವಳಿಗಳನ್ನು ಪಾಲಿಸದೆ ಮನಬಂದಂತೆ ಭ್ರಷ್ಟಾಚಾರವೆಸಗಿ ಸಂಘಕ್ಕೆ ನೂರಾರು ಕೋಟಿಗಳಷ್ಟು ನಷ್ಟು ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ಸಂಬಂದ ಕೈಗೊಂಡ ಕ್ರಮಗಳೇನು ? (ಮಾಹಿತಿ ನೀಡುವುದು)

## ವಿವಿಧ ಸಾಲ ಸೌಲಭ್ಯಗಳು ಮತ್ತು ಗಂಗಾಕಲ್ಯಾಣ ಯೋಜನೆಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪ (೮೪) ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೭–೧೮ ಮತ್ತು ೨೦೧೮–೧೯ನೇ ಸಾಲಿನಲ್ಲಿ ದಿ: ದೇವರಾಜು ಅರಸು ಅಭಿವೃದ್ಧಿ ನಿಗಮದ ವತಿಯಿಂದ ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ವಿವಿಧ ಸಾಲಸೌಲಭ್ಯ ಮತ್ತು ಗಂಗಾಕಲ್ಯಾಣ ಯೋಜನೆಯಡಿ ಬಂದಂತಹ ಅರ್ಜಿಗಳ ಸಂಖ್ಯೆ ಎಷ್ಟು ; ಗುರಿ ಮತ್ತು ಸಾಧನೆ ಎಷ್ಟು ; (ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕುವಾರು ನೀಡುವುದು)

(ಆ) ಫಲಾನುಭವಿಗಳನ್ನು ಆಯ್ಕೆಮಾಡುವಾಗ ನಿಗದಿತ ದಿನಾಂಕದೊಳಗೆ ತಾಲ್ಲೂಕುವಾರು ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳೊಡನೆ ಆಯ್ಕೆ ಸಮಿತಿಯಲ್ಲಿ ಪಾರದರ್ಶಕವಾಗಿ ಚರ್ಚಿಸಿ ಜಿಲ್ಲಾ ವ್ಯವಸ್ಥಾಪಕರು ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳು ಅನುಮೋದನೆ ಪಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ನೇಮಕದ ಬಗ್ಗೆ

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)** –

೧೫ (೯೫) ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಯಾವ ಯಾವ ಜಿಲ್ಲೆಗಳ, ಯಾವ ಇಲಾಖೆಯ ಪತ್ರಾಂಕಿತ ಅಧಿಕಾರಿಗಳಿಗೆ (ಗೆಜೆಟೆಡ್ ಮ್ಯಾನೇಜರ್‌ಗಳಿಗೆ) ಪ್ರಭಾರ ಜಿಲ್ಲಾ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ;

(ಆ) ಈ ರೀತಿ ನೇಮಕ ಮಾಡುವಾಗ ಜೇಷ್ಠತೆಯನ್ನು (ಸೀನಿಯಾರಿಟಿ) ಪಾಲನೆ ಮಾಡಲಾಗಿದೆಯೇ ;

(ಇ) ಇಲ್ಲದಿದ್ದಲ್ಲಿ, ಏಕೆ ಪಾಲನೆ ಮಾಡಿರುವುದಿಲ್ಲ ;

(ಈ) ಪಾಲನೆ ಮಾಡದ ಅಧಿಕಾರಿ/ನೌಕರರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ವಿಧಾನಸೌಧ, ಬೆಂಗಳೂರು, ಪಿ7, ಕಾಸೂ. 254, ಪ್ರತಿಗಳು 1500

**List of Questions for Oral Answers**

**Total No. of Questions - 15**

# LIST - 01

# KARNATAKA LEGISLATIVE COUNCIL
## ONE HUNDRED AND THIRTY EIGHTH SESSION
## Monday, the 15th July, 2019

---

**GROUP - I**

1. Minister for Agriculture
2. Minister for Social Welfare
3. Minister for Co-operation
4. Minister for Backward Classes Welfare
5. Minister for Animal Husbandry and Fisheries
6. Minister for Horticulture
7. Minister for Tourism and Sericulture

---

**KRUSHI BHAGYA SCHEME IN BIDAR DISTRICT**

**Sri Vijay Singh (Local Authorities Constituency) -**

1 (63) Will the Minister for Agriculture be pleased to state:-

a) the grant released under Krushi Bhagya Scheme in Bidar district; the number of beneficiaries selected; (talukwise details be furnished)

b) the number of sowing seeds distribution centres in Bidar district; (talukwise details be furnished) the reason for causing delay in distribution of sowing seeds to farmers in said centres; the measures taken by the Government to distribute the sowing seeds properly?

## ESTABLISHMENT OF KADUGOLLA COMMUNITY DEVELOPMENT CORPORATION

**Smt. Jayamma (Elected by Legislative Assembly) -**

2 (51) Will the Minister for Backward Classes Welfare be pleased to state:-

a) the population of Kadugolla community in Karnataka State; (districtwise information be furnished)

b) whether the Government intends to establish a separate corporation for the complete development of Kadugolla community;

c) if so, the date on which the corporation would be established?

## DEVELOPMENT OF HORTICULTURE CROPS AS ISRAEL MODEL

**Sri Nirani Hanamant Rudrappa (Graduates' Constituency)-**

**Dr. Y.A. Narayanaswamy (Teachers' Constituency)-**

3 (44+45+113) Will the Minister for Horticulture be pleased to state:-

a) the particulars of districts which have been selected to develop horticultural crops in the line of Israel model in the State;

b) the present stage of development works of horticultural crops in the lines of Israel model in the said districts; the time limit within which the said scheme would be completed;

c) the grant that has been earmarked for the said works; the grant released/utilised in the year 2018-19; (districtwise complete information be furnished)

d) whether Israel model agriculture is functioning in the State; the particulars of models in which horticulture activities are developing in the State; (districtwise, cropwise information be furnished)

e) whether Bagalkot and Vijayapura districts have been brought under the said scheme as per the assurance given by the Hon'ble Chief Minister in Horticulture Conference held at the premises of Univerisity of Horticultural Sciences, Bagalkot; if not, the reasons therefor; the grant that has been earmarked for the same; (details be furnished)

f) the steps taken to provide water from Ghataprabha river to University of Horticultural Sciences, Bagalkot as per the assurance given by the Hon'ble Chief Minister at the Horticulture Conference and the present stage of the said work; the time limit within which the said work would be completed?

**UNREVEALING OF CASTE CENSUS REPORT**

**Sri Raghunath Rao Malkapure (Elected by Legislative Assembly) -**

4 (54) Will the Minister for Backward Classes Welfare be pleased to state:-

a) the date on which caste census/survey was conducted in the State; the date on which caste census/survey was completed; the number of employees/officers who have been utilised for census; the amount spent for the same; (detailed information be furnished)

b) the reasons for conducting new caste census/survey by the Government; the facts which have been considered while conducting caste census/survey ;

c) whether the caste census/survey report is completed; if not, the reasons therefor; whether the Government has accepted the report; if so, the stand of the Government for implementing the same; (complete information be furnished)

d) the particulars of merits and demerits for conducting new castewise survey? (details be furnished)

**FUND RELEASED FOR AGRICULTURE LOAN AND IMPLEMENTATION OF LOAN WAIVING SCHEME**

**Sri N. RaviKumar (Elected by Legislative Assembly)-**

**Dr. Tejaswini Gowda (Elected by Legislative Assembly)-**

5 (22+124) Will the Minister for Co-operation be pleased to state:-

a) the grant released so far in connection with waiving of farmers' loan; (districtwise information be furnished)

b) the conditions and criteria prescribed to get the benefit of the said; the particulars of documents that have to be submitted to the department compulsorily;

c) the number of farmers whose loan has been waived off so far; (districtwise information be furnished) the number of beneficiaries who have got benefitted from the same; the number of small and medium farmers;

d) the number of financial institutions including co-operative Banks, Nationalised Banks to which fund has been released for waiving farmers' loan; (districtwise, bankwise information be furnished)

e) whether it has come to the notice of the Government that the farmers are facing hardship due to non-availability of required revenue documents for getting annual six thousand rupees announced by the Central Government

to farmers; the steps initiated by the agriculture department along with the revenue department and banks for providing suitable documents to the farmers; the role of the banks to pass on the benefit of loan waiving to farmers;

f) the number of farmers who have committed suicide after declaration of loan waiving facility to the farmers in the State; the reasons for the same? (districtwise information be furnished)

**DISORDERLINESS IN CUBBON PARK**

**Sri M. Narayanaswamy (Local Authorities Constituency) -**

6 (122) Will the Minister for Horticulture be pleased to state:-

a) whether it has come to the notice of the Government that the environment of cubbon park is being unclean due to non availability of toilet facility to public and senior citizen who visit park for walking and the public are passing urine whereever they want;

b) whether the Government is aware of the fact that public who visit the park are depending only on toilet in Government Central Library;

c) the action taken by the department to construct toilet in Cubbon Park? (details be furnished)

**SANCTIONING GRANT TO SC/ST COLONIES IN KODAGU DISTRICT FOR BASIC FACILITIES**

**Smt. S.Veena Achaiah (Elected by Legislative Assembly)-**

7 (70) Will the Minister for Social Welfare be pleased to state:-

a) whether it has come to the notice of the Government that adequate basic facilities damaged in SC/ST colonies due to natural calamity occurred in Kodagu district during the last year;

b) if so, the estimated cost for providing such basic facilities;

c) the grant released for providing said facilities during the year 2018-19 and the details of the works taken up;

d) the grant earmarked, released and spent for the said works for the year 2019-20 and the particulars of the works? (complete details be furnished)

**DEVELOPMENT OF OLD FORT OF RAICHUR**

**Sri N.S. Bose Raju (Elected by Legislative Assembly) -**

8 (93) Will the Minister for Tourism and Sericulture be pleased to state:-

a) the steps taken by the Government for the development of old fort in Raichur; whether the Government is aware of the fact that four crore rupees sanctioned for the development of the said fort is not utilised during the year 2015-16; if so, the measures taken by the Government in this regard;

b) the total grant sanctioned by the Tourism department to Raichur district during the year 2019-20?

**DEVELOPMENT OF TOURIST PLACES IN RURAL AREAS**

**Dr. Tejaswini Gowda (Elected by Legislative Assembly)-**

9 (116) Will the Minister for Tourism and Sericulture be pleased to state:-

a) the particulars of tourist places and income receiving by the Tourism department in the Karnataka State;

b) whether it has come to the notice of the Government that 5 hilltops of rural area like Savanadurga, Nandigiri, , Chennagiri, Skandagiri, Brahmagiri and Vardhanagiri are located at a distance of 50 Kms from the capital city are attracting a large number of tourists;

c) whether required basic facilities like Government guest house, hotels and clinics have been provided to tourists in such places; whether required fund has been earmarked for the same;

d) whether safety measures have been taken to control the problem of alcohol consumption by restricting the entry of tourists at high peak dangerous spots;

e) the steps taken by the Government to recruit unemployed youths of rural areas as nature guides?

**VACANT POSTS IN TOURISM DEPARTMENT**

**Sri K.T.Srikantegowda (Graduates' Constituency) -**

10 (48) Will the Minister for Tourism and Sericulture be pleased to state:-

a) the total number of posts sanctioned and vacant in Tourism department in the State; (districtwise details be furnished)

b) the date on which these posts would be filled up;

c) whether the Cadre and Recruitment (C&R) rules have been framed in the department;

d) whether it is necessary to change the Cadre and Recruitment rules in the department?

**SANCTION OF YATRI NIVAS**

**Sri Basavaraj Patil Itagi (Local Authorities Constituency)-**

11 (18) Will the Minister for Tourism and Sericulture be pleased to state:-

a) the grant released by the Tourism department to Raichur district for the last 4 years; (yearwise information be furnished)

b) the proposals received for sanctioning of Yatri Nivas; if so, the action taken by the Government in this regard? (details be furnished)

**CONFUSION IN LOAN WAIVING SCHEME IN KODAGU DISTRICT**

**Sri M.P.Sunil Subramani (Local Authorities Constituency)-**

12 (80) Will the Minister for Co-operation be pleased to state:-

a) the number of cases in which farmers' loan has been waived under Loan Waiving Scheme of the State Government in Kodagu till July-2019; (talukwise information be furnished)

b) whether No-Objection Certificate has been issued to the farmers of Kodagu district to obtain new loan under the said scheme; if so, the number of farmers who got the same; (details be furnished)

c) whether the short term loan has been given to farmers in P.L.D. banks in Kodagu district during the year 2019-20; if so, the amount of loan given so far? (details be furnished)

**NON-COMPLIANCE OF TENDER RULES**

**Dr. Y.A. Narayanaswamy (Teachers' Constituency)-**

13 (83) Will the Minister for Social Welfare be pleased to state:-

a) the planning fund earmarked for the building and basic facilities of the Karnataka Residential Educational Institutions Society under Social Welfare Department during the year 2017-18;

b) whether it has come to the notice of the Government that work order has been issued by inviting tender worth of Rs.2,176.00 crores rupees by the said society from January-2018 to March-2018;

c) if so, the amount of the tender; (name of the tenderer, tender, date of the work order be furnished)

d) whether it has come to the notice of the Government that loss of hundreds of crores of rupees caused to the society by committing corruption erratically without following the rules and regulations and amending rules of tender in the above society;

e) if so, the steps taken in this regard? (information be furnished)

## VARIOUS LOAN FACILITIES AND GANGA KALYANA YOJANA

**Sri N. Appajigowda (Local Authorities Constituency) -**

14 (84) Will the Minister for Backward Classes Welfare be pleased to state:-

a) the number of applications received under various loan facilities and Ganga Kalyana Yojana from all the taluks of Mandya district by D. Devaraja Urs Development Corporation during the year 2017-18 and 2018-19; the details of target and achievements; (talukwise list of selected beneficiaries be furnished)

b) whether it has come to the notice of the Government that while selecting beneficiaries within stipulated date, the District Managers and Taluk Nodal Officers are not obtaining approval by discussing transparently in the selection committee of talukwise representatives and concerned taluk level officers;

c) If so, the actions taken against concerned officers? (detailed information be furnished)

## RECRUITMENT OF GAZETTED OFFICERS IN BACKWARD CLASSES WELFARE DEPARTMENT

**Sri H.M. Revanna (Elected by Legislative Assembly)-**

15 (95) Will the Minister for Backward Classes Welfare be pleased to state:-

a) the particulars of districts in which gazetted officers (Gazetted Managers) of various departments have been appointed as incharge district officers in the Backward Classes Welfare Department;

b) whether the seniority has been complied within such appointment;

c) if not, the reasons therefor;

d) the action taken against officers/employees who did not comply with the same?

**K.R. MAHALAKSHMI**
Secretary (I/c)
Karnataka Legislative Council.

Vikasa Soudha, Bengaluru, P7, wd 254, 750 Copies